...ಕ ಸಂಸ್ಕೃತ ವಿಶ್ವವಿದ್ಯಾಲಯ
...ರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
...ವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## 2019ರ ಮಾರ್ಚ್ 13ರಂದು ನಡೆದ ಪ್ರಶಿಕ್ಷಣ ಪರಿಷತ್ 26ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್‌ನ 26ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾರ್ಚ್ 13, 2019ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | | |
|---|---|---|
| ೧. | ಪ್ರೊ. ಪದ್ಮಾಶೇಖರ್, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | ವಿದ್ವಾನ್ ನರಸಿಂಹ ಭಟ್ಟ, ಪ್ರಾಚಾರ್ಯರು, ಸೋಂದಾ | ಸದಸ್ಯರು |
| ೩. | ವಿದ್ವಾನ್ ರಾಮಚಂದ್ರ ನಾ. ಭಟ್ಟ, ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೪. | ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ, ಪ್ರಾಚಾರ್ಯರು, ಧಾರವಾಡ | ಸದಸ್ಯರು |
| ೫. | ಡಾ. ಎಸ್.ಎನ್. ಸಂಪತ್ಕುಮಾರ್, ಪ್ರಾಚಾರ್ಯರು(ಪ್ರ), ಬೆಂಗಳೂರು | ಸದಸ್ಯರು |
| ೬. | ಡಾ. ಬಿ.ವಿ ವೆಂಕಟರಮಣ, ಡೀನ್, ಶಾಸ್ತ್ರ ನಿಕಾಯ | ಸದಸ್ಯರು |
| ೭. | ಪ್ರೊ. ವಿ. ಗಿರೀಶ್‌ಚಂದ್ರ, ಡೀನ್, ಭಾಷಾ ನಿಕಾಯ | ಸದಸ್ಯರು |
| ೮. | ಪ್ರೊ. ವಿ. ಗಿರೀಶ್ ಚಂದ್ರ, ಪ್ರ. ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | | |
|---|---|---|
| ೧. | ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಡೀನ್, ವೇದಾಂತ ನಿಕಾಯ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

<table>
<tr><th>ವಿ.ಸಂ.</th><th>ವಿಷಯ, ಟಿಪ್ಪಣಿ ಮತ್ತು ನಿರ್ಣಯ</th></tr>
<tr><td>ವಿಷಯ 01</td><td>CAS Statute ಅನ್ನು ಅಳವಡಿಸಿಕೊಳ್ಳಲು ಅನುಮತಿ ನೀಡುವ ಬಗೆಗೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ CAS Statute ಅನ್ನು ಮಾನ್ಯ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಮಾನ್ಯ ಕುಲಾಧಿಪತಿಗಳು ದಿನಾಂಕ: 31.01.2019ರಂದು ಈ ಪರಿನಿಯಮವನ್ನು ಅನುಮೋದಿಸಿರುತ್ತಾರೆ. ಸಹಾಯಕ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರನ್ನು ಆಯಾಯ ಹುದ್ದೆಗಳಿಗೆ ಪದೋನ್ನತಿ ನೀಡಲು ಅವಕಾಶವಿರುತ್ತದೆ. ಈ ಸಂಬಂಧವಾಗಿ ಅರ್ಜಿಯನ್ನು ರೂಪಿಸಿದ್ದು ಮುಂದಿನ ಕ್ರಮ ಕೈಗೊಳ್ಳಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಪ್ರಶಿಕ್ಷಣ ಪರಿಷತ್ ಅನುಮೋದನೆಗಾಗಿ ಮಂಡಿಸಿದೆ.</td></tr>
<tr><td>ನಿರ್ಣಯ</td><td>ಸಭೆಯು ಅರ್ಜಿಯನ್ನು ಪರಿಶೀಲಿಸಿತು. ಕೆಲವು ಪರಿಷ್ಕಾರಗಳೊಂದಿಗೆ ಅರ್ಜಿಯನ್ನು ಒಪ್ಪಿತು ಮತ್ತು ಮುಂದಿನ ಕ್ರಮ ಕೈಗೊಳ್ಳಲು ಒಪ್ಪಿಗೆ ನೀಡಿತು.</td></tr>
<tr><td>ವಿಷಯ 02</td><td>ಪಿಎಚ್.ಡಿ (ವಿದ್ಯಾವಾರಿಧಿ) ಶುಲ್ಕ ಹೆಚ್ಚಿಸುವ ಬಗೆಗೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಸಾಕಷ್ಟು ಸಂಖ್ಯೆಯಲ್ಲಿ ಪಿಎಚ್.ಡಿ ಪದವಿಗಾಗಿ ನೋಂದಾಯಿತರಾಗಿರುತ್ತಾರೆ. ಈ ವಿದ್ಯಾರ್ಥಿಗಳ ಶೋಧಪ್ರಬಂಧ ಸಮರ್ಪಣೆಯ ನಂತರದ ವೆಚ್ಚಗಳು ಅಧಿಕವಾಗಿದ್ದು ಇತರೆ ವಿಶ್ವವಿದ್ಯಾಲಯಗಳಂತೆ ನಮ್ಮ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿಯೂ ಪಿಎಚ್.ಡಿ(ವಿದ್ಯಾವಾರಿಧಿ) ಶುಲ್ಕ ಹೆಚ್ಚಿಸಬಹುದಾಗಿದ್ದು ಪರಿಷತ್ತಿನಲ್ಲಿ ಮಂಡಿಸಿದೆ. ವಿದೇಶಿ ವಿದ್ಯಾರ್ಥಿಗಳಿಗೆ ಈ ಶುಲ್ಕ ದುಪ್ಪಟ್ಟಾಗಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಈ ಶುಲ್ಕ 50% ರಿಯಾಯಿತಿ ಇರುತ್ತದೆ.<br>
<table>
<tr><th rowspan="2">ಕ್ರಸಂ</th><th rowspan="2">ವಿಷಯ</th><th colspan="2">ಪರೀಕ್ಷಾ ಶುಲ್ಕ</th></tr>
<tr><th>ಪ್ರಸ್ತುತ</th><th>ಪರಿಷ್ಕೃತ</th></tr>
<tr><td>1</td><td>ಅರ್ಜಿ ಶುಲ್ಕ</td><td>500.00</td><td>500.00</td></tr>
<tr><td>2</td><td>ಪ್ರವೇಶ ಪರೀಕ್ಷೆ ಶುಲ್ಕ</td><td>300.00</td><td>1000.00</td></tr>
</table></td></tr>
</table>

| | | | |
|---|---|---|---|
| 3 | ತಾತ್ಕಾಲಿಕ ನೋಂದಣಿ ಶುಲ್ಕ | 5000.00 | 2000.00 |
| 4 | ಕೋರ್ಸವರ್ಕ್ ಶುಲ್ಕ | 3000.00 | 2000.00 |
| 4 | ಕೋರ್ಸವರ್ಕ್ ಪರೀಕ್ಷಾ ಶುಲ್ಕ | 1000.00 | 1000.00 |
| 5 | ಕೋರ್ಸವರ್ಕ್ ಮರುಮೌಲ್ಯಮಾಪನ ಶುಲ್ಕ (ಪ್ರತಿ ಪತ್ರಿಕೆಗೆ) | 1000.00 | 1000.00 |
| 6 | ವಾರ್ಷಿಕ ಭೋಧನಾ ಶುಲ್ಕ | 5000.00 | 6500.00 |
| 7 | ವಾರ್ಷಿಕ ಗ್ರಂಥಾಲಯ ಶುಲ್ಕ | 500.00 | 500.00 |
| 8 | ಪ್ರಬಂಧ ಸಲ್ಲಿಕೆ ಶುಲ್ಕ | 8000.00 | 10000.00 |
| 9 | ಘಟಿಕೋತ್ಸವದ ಶುಲ್ಕ (ಪ್ರಮಾಣ ಪತ್ರ – ಸಂಸ್ಕೃತ & ಆಂಗ್ಲ) | 1000.00 | 1000.00 |
| 10 | ಪ್ರಬಂಧ ಪ್ರಕಟಣೆ ಅನುಮತಿ ಶುಲ್ಕ | 2500.00 | 3500.00 |
| 11 | ಪುನರ್ ನೋಂದಣಿ ಶುಲ್ಕ | – | 20000.00 |

| | |
|---|---|
| ನಿರ್ಣಯ | ಪಿಎಚ್.ಡಿ (ವಿದ್ಯಾವಾರಿಧಿ) ಶುಲ್ಕವನ್ನು ಮೇಲ್ಕಂಡಂತೆ ಹೆಚ್ಚಿಸಲು ಪರಿಷತ್ತು ಅನುಮೋದಿಸಿತು. |
| ವಿಷಯ 03 | ಪಿಎಚ್.ಡಿ ಕಾರ್ಯಭಾರವನ್ನು ನಿರ್ದಿಷ್ಟಪಡಿಸುವ ಬಗೆಗೆ.<br>ಪಿಎಚ್.ಡಿ(ವಿದ್ಯಾವಾರಿಧಿ) ಕೋರ್ಸ್‌ಗೆ ಸಂಬಂಧಿಸಿದಂತೆ ಶೋಧವಿದ್ಯಾರ್ಥಿಗಳನ್ನು ತುಂಬಿಕೊಳ್ಳಲು ಖಾಲಿ ಇರುವ ಸ್ಥಾನಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸುವ ಜವಾಬ್ದಾರಿಯು ಅಧ್ಯಯನಾಂಗದ್ದಾಗಿರುತ್ತದೆ. ತದನಂತರ ಶೋಧಪ್ರಬಂಧವನ್ನು ಮೌಲ್ಯಮಾಪನಕ್ಕೆ ಕಳುಹಿಸುವ ಮತ್ತು ಪಿಎಚ್.ಡಿ(ವಿದ್ಯಾವಾರಿಧಿ) ಪದವಿ ಪ್ರದಾನದವರೆಗಿನ ಎಲ್ಲಾ ಜವಾಬ್ದಾರಿಗಳೂ ಪರೀಕ್ಷಾಂಗಕ್ಕೆ ಸಂಬಂಧಿಸಿರುತ್ತದೆ. ಇದಕ್ಕೆ ಅನುಮೋದನೆ ಕೋರಿ ಪ್ರಶಿಕ್ಷಣ ಪರಿಷತ್ತಿನಲ್ಲಿ ವಿಷಯ ಮಂಡಿಸಿದೆ. |
| ನಿರ್ಣಯ | ಪಿಎಚ್.ಡಿ ಕಾರ್ಯಭಾರವನ್ನು ವಿಭಜಿಸಲು ಸಭೆಯು ಅನುಮತಿ ನೀಡಿತು. |
| ವಿಷಯ 04 | ಎಮ್.ಫಿಲ್ ಪರೀಕ್ಷೆಯ ಶೋಧಪ್ರಬಂಧದ ಮೌಲ್ಯಮಾಪನ ನಡೆಸುವ ಬಗೆಗೆ.<br>ಈವರೆಗೆ ಎಮ್.ಫಿಲ್ ಪರೀಕ್ಷೆಯ ಶೋಧಪ್ರಬಂಧವನ್ನು ಆಂತರಿಕ ಮೌಲ್ಯಮಾಪನ ಮಾತ್ರ ಮಾಡಲಾಗುತ್ತಿದ್ದು ಇನ್ನು ಮುಂದೆ ಆಂತರಿಕ ಮತ್ತು ಬಾಹ್ಯ ಮೌಲ್ಯಮಾಪನ ಮಾಡಲು ಸಭೆಯ ಅನುಮತಿ ಕೋರಿದೆ. ಈ ಎರಡು ಮೌಲ್ಯಮಾಪನಗಳಲ್ಲಿ 15ಕ್ಕೂ ಹೆಚ್ಚು ಅಂಕಗಳ ವ್ಯತ್ಯಾಸ ಕಂಡುಬಂದಲ್ಲಿ ಅದನ್ನು ಮೂರನೇ ಮೌಲ್ಯಮಾಪನಕ್ಕೆ ಕಳುಹಿಸಬಹುದಾಗಿದೆ. ಇದನ್ನು ಪ್ರಶಿಕ್ಷಣ ಪರಿಷತ್ತಿನ ನಿರ್ಣಯ ಕೋರಿ ಸಭೆಯಲ್ಲಿ ಮಂಡಿಸಿದೆ. ಇದನ್ನು ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಎಮ್.ಫಿಲ್ ಪರೀಕ್ಷೆಯ ಶೋಧಪ್ರಬಂಧದ ಮೌಲ್ಯಮಾಪನ ನಡೆಸಲು ಸಭೆಯು ಒಪ್ಪಿಗೆ ನೀಡಿತು. ಶೋಧಪ್ರಬಂಧದ ಮೌಲ್ಯಮಾಪನಕ್ಕೆ ರೂ. 100/– ನಿಗದಿಪಡಿಸಬಹುದಾಗಿದೆ ಎಂದು ಸಭೆ ತಿಳಿಸಿತು. |
| ವಿಷಯ 05 | ಪ್ರಶ್ನೆಪತ್ರಿಕೆಗಳ ಗೌಪ್ಯತೆ ಕಾಪಾಡುವ ಬಗೆಗೆ.<br>ವಿಶ್ವವಿದ್ಯಾಲಯದ ವಾರ್ಷಿಕ ಮತ್ತು ಸೆಮಿಸ್ಟರ್ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಡಿಟಿಪಿ ಮಾಡುವವರೇ ಗೌಪ್ಯತೆ ಕಾಪಾಡಬೇಕಾಗಿರುತ್ತದೆ. ಆದ್ದರಿಂದ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾದಲ್ಲಿ ಡಿಟಿಪಿ ಮಾಡುವವರೇ ಜವಾಬ್ದಾರರಾಗಿರುತ್ತಾರೆ. ಇದನ್ನು ಅನುಮೋದಿಸಲು ಸಭೆಯಲ್ಲಿ ಮಂಡಿಸಲಾಗಿದೆ. |
| ನಿರ್ಣಯ | ಈ ವಿಷಯಕ್ಕೆ ಪರಿಷತ್ತಿನ ಒಪ್ಪಿಗೆ ನೀಡಿತು. |
| ವಿಷಯ 06 | ಉತ್ತೀರ್ಣತಾ ಮಾನದಂಡ ನಿಗದಿಪಡಿಸುವ ಬಗ್ಗೆ,<br>ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಪ್ರಥಮಾ, ಕಾವ್ಯ ಹಾಗೂ ಸಾಹಿತ್ಯ ಇತ್ಯಾದಿ ಪರೀಕ್ಷೆಗಳ ಉತ್ತೀರ್ಣತಾ ಶೇಕಡ ಪ್ರತಿಯೊಂದು ಪತ್ರಿಕೆಗೆ 30 ಹಾಗೂ ಒಟ್ಟಾರೆ 35 ಅಂಕಗಳು ಎಂದು ಈ ಹಿಂದಿನ ವರ್ಷದಲ್ಲಿ ತಿಳಿಸಲಾಗಿತ್ತು. ಆದರೆ ಆ ರೀತಿಯನ್ನು ಅನುಸರಿಸಿ ಫಲಿತಾಂಶ ಬಿಡುಗಡೆ ಮಾಡುವುದು & ಅಂಕಪತ್ರಗಳನ್ನು ಮುದ್ರಿಸುವಲ್ಲಿ ತಾಂತ್ರಿಕ ಸಮಸ್ಯೆಗಳು ಎದುರಾಗುತ್ತಿವೆ. ಆದ ಕಾರಣ ಎಂದಿನಂತೆ ಪ್ರತಿಯೊಂದು ವಿಷಯದಲ್ಲಿ 35% ಅಂಕಗಳನ್ನು ಉತ್ತೀರ್ಣತಾ ಮಾನದಂಡವಾಗಿ ನಿರ್ಣಯಿಸಲು ಅನುಮತಿಯನ್ನು ಕೋರಿದೆ. |
| ನಿರ್ಣಯ | ಪ್ರತಿಯೊಂದು ವಿಷಯದಲ್ಲಿ 35% ಅಂಕಗಳನ್ನು ಉತ್ತೀರ್ಣತಾ ಮಾನದಂಡವಾಗಿ ನಿರ್ಣಯಿಸಲು ಪರಿಷತ್ತು ಒಪ್ಪಿತು. |
| ವಿಷಯ 07 | ಬಿ.ಎ ಹಾಗೂ ಎಂ.ಎ ಪರೀಕ್ಷೆಗಳ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಶ್ರೇಣಿ ನಿಗದಿಪಡಿಸುವ ಬಗ್ಗೆ,<br>ಬಿ.ಎ ಹಾಗೂ ಎಂ.ಎ ಪರೀಕ್ಷೆಗಳ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಶ್ರೇಣಿಯನ್ನು ನಿರ್ಧರಿಸಿ ಅಂಕಪತ್ರಗಳಲ್ಲಿ ನಮೂದಿಸಲು ತಾಂತ್ರಿಕ ಸಮಸ್ಯೆಗಳು ಉಂಟಾಗುತ್ತಿವೆ. ಆದ ಕಾರಣ ಅದರ ಬಗ್ಗೆ ಚರ್ಚಿಸಲು ತೀರ್ಮಾನ ತೆಗೆದುಕೊಳ್ಳಲು ಈ ವಿಷಯವನ್ನು ಮಂಡಿಸಲು ಅನುಮತಿಯನ್ನು ಕೋರಿದೆ. |
| ನಿರ್ಣಯ | ಬಿ.ಎ ಪ್ರಥಮಾ ಮತ್ತು ದ್ವಿತೀಯ ವರ್ಷಗಳ ಹಾಗೂ ಎಂ.ಎ ಪ್ರಥಮಾ ವರ್ಷಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ |

ಮಾ — ಅಂಕಪಟ್ಟಿಗಳಲ್ಲಿ ಯಾವುದೇ ಶ್ರೇಣಿಯನ್ನು ನಿಗದಿಪಡಿಸದೇ ನಿಗದಿತ ಅವಧಿಯೊಳಗಾಗಿ ಅಂತಿಮ ವರ್ಷದ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಶ್ರೇಣಿ ನೀಡಲಾಗುವುದು. ಅವಧಿ ಮೀರಿದ ಸಂದರ್ಭದಲ್ಲಿ ಕ್ರೋಢೀಕೃತ ಅಂಕಪಟ್ಟಿ ನೀಡಲು ಸಭೆ ಒಪ್ಪಿಗೆ ಸೂಚಿಸಿತು.

**ವಿಷಯ 08**

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತವನ್ನು ಪರಿಷ್ಕರಿಸುವ ಬಗೆಗೆ.

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತವನ್ನು ಹೆಚ್ಚಿಸಬೇಕಿದ್ದು, ಸದರಿ ವಿವರಗಳು ಈ ಕೆಳಕಂಡಂತಿವೆ. ಈ ದರವನ್ನು ಸದರಿ ನಡೆಯುತ್ತಿರುವ ಮೌಲ್ಯಮಾಪನ ಕಾರ್ಯದಿಂದಲೇ ಅನ್ವಯಿಸುವಂತೆ ಅನುಮತಿ ಕೋರಿದೆ.

| ಕ್ರಸಂ | ವಿಷಯ | ಪರೀಕ್ಷಾ ಶುಲ್ಕ | |
|---|---|---|---|
| | | ಪ್ರಸ್ತುತ (ರೂ) | ಪರಿಷ್ಕೃತ (ರೂ) |
| 1 | ಪ್ರಥಮ ತರಗತಿ ಮೌಲ್ಯಮಾಪನ ಸಂಭಾವನೆ | 4.00 (ಒಂದು ಪತ್ರಿಕೆಗೆ) | 5.00 (ಒಂದು ಪತ್ರಿಕೆಗೆ) |
| 2 | ಕಾವ್ಯ ತರಗತಿ ಮೌಲ್ಯಮಾಪನ ಸಂಭಾವನೆ | 6.00 (ಒಂದು ಪತ್ರಿಕೆಗೆ) | 7.00 (ಒಂದು ಪತ್ರಿಕೆಗೆ) |
| 3 | ಸಾಹಿತ್ಯ ತರಗತಿ ಮೌಲ್ಯಮಾಪನ ಸಂಭಾವನೆ | 9.00 (ಒಂದು ಪತ್ರಿಕೆಗೆ) | 10.00 (ಒಂದು ಪತ್ರಿಕೆಗೆ) |
| 4 | ಮುಖ್ಯ ಅಧೀಕ್ಷಕರ ಸಂಭಾವನೆ | 3000.00 | 3500.00 |
| 5 | ಉಪ ಮುಖ್ಯ ಅಧೀಕ್ಷಕರ ಸಂಭಾವನೆ (ಡಿ.ಸಿ.ಗಳಿಗೆ) | 2750.00 | 3000.00 |

**ನಿರ್ಣಯ**

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತವನ್ನು ಮೇಲ್ಕಂಡಂತೆ ಹೆಚ್ಚಿಸಲು ಪರಿಷತ್ತು ಅನುಮತಿ ನೀಡಿತು.

**ವಿಷಯ 09**

**Pre-Ph.D.** ಪರೀಕ್ಷಾ ಕಾರ್ಯಗಳಿಗೆ ಹಾಗೂ ಪ್ರವೇಶ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತ ಪರಿಷ್ಕರಿಸುವ ಬಗೆಗೆ.

ವಿದ್ಯಾವಾರಿಧಿ (ಪಿಹೆಚ್.ಡಿ.) ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತವನ್ನು ಹೆಚ್ಚಿಸಬೇಕಿದ್ದು, ಸದರಿ ವಿವರಗಳು ಈ ಕೆಳಕಂಡಂತಿವೆ. ಈ ದರವನ್ನು ಸದರಿ ನಡೆಯುತ್ತಿರುವ ಮೌಲ್ಯಮಾಪನ ಕಾರ್ಯದಿಂದಲೇ ಅನ್ವಯಿಸುವಂತೆ ಅನುಮತಿ ಕೋರಿದೆ.

| ಕ್ರಸಂ | ವಿಷಯ | ಪರೀಕ್ಷಾ ಶುಲ್ಕ | |
|---|---|---|---|
| | | ಪ್ರಸ್ತುತ (ರೂ) | ಪರಿಷ್ಕೃತ (ರೂ) |
| 1 | ಪ್ರಶ್ನೆಪತ್ರಿಕೆ ತಯಾರಿಕೆ ಸಂಭಾವನೆ/ಗೌರವಧನ | – | 400.00 |
| 2 | ಮೌಲ್ಯಮಾಪನ ಸಂಭಾವನೆ/ಗೌರವಧನ) | – | ಪ್ರತಿ ಪತ್ರಿಕೆಗೆ ರೂ.50.00 (ಕನಿಷ್ಠ 300.00) |
| 3 | **Pre-Submission Colloquium** ಗೆ ಆಗಮಿಸುವ ಬಾಹ್ಯ ಪರೀಕ್ಷಕರ ಸಂಭಾವನೆ | – | 1000.00 ಹಾಗೂ ನಿಯಮಾನುಸಾರ ಪ್ರಯಾಣಭತ್ಯೆ & ಇತರೆ ಭತ್ಯೆಗಳನ್ನು ನೀಡಲಾಗುತ್ತದೆ. |

**ನಿರ್ಣಯ**

**Pre-Ph.D.** ಪರೀಕ್ಷಾ ಕಾರ್ಯಗಳಿಗೆ ಹಾಗೂ ಪ್ರವೇಶ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಗೌರವ ಧನ ಹಾಗೂ ಮೌಲ್ಯಮಾಪನದ ಮೊತ್ತ ಪರಿಷ್ಕರಿಸಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ 10**

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಿಸುವ ಬಗೆಗೆ.

ಎಲ್ಲಾ ಪರೀಕ್ಷೆಗಳ ಪರೀಕ್ಷಾ ಶುಲ್ಕದಿಂದ ಬರುವಂತಹ ಮೊತ್ತವು ಪರೀಕ್ಷಾಂಗದ ಖರ್ಚು ವೆಚ್ಚಕ್ಕೆ ಸಾಕಾಗುತ್ತಿಲ್ಲ. ಆದ ಕಾರಣ ಸ್ವಲ್ಪ ಮಟ್ಟದಲ್ಲಿ ಪರೀಕ್ಷಾ ಶುಲ್ಕವನ್ನು ಹೆಚ್ಚಿಸಲು ಅನುಮತಿ ಕೋರಿದೆ. SC/ST & CAT-I ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶ ಸಂಖ್ಯೆ :– ಇಡಿ 295 ಯುಎನ್ಇ 2018, ದಿ:–23/01/2019 ರಂತೆ ತೀರ್ಮಾನಿಸಲು ಕೋರಿದೆ. ಹೆಚ್ಚಿಸಬಹುದಾದ ಶುಲ್ಕದ ವಿವರವು ಈ ಕೆಳಕಂಡಂತಿವೆ.

| ವಿಷಯಗಳು | ಪರೀಕ್ಷಾ ಶುಲ್ಕ | | ಅಂಕಪಟ್ಟಿ ಶುಲ್ಕ | | ಒಟ್ಟು ಶುಲ್ಕ | |
|---|---|---|---|---|---|---|
| | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ |

| | | | | | |
|---|---|---|---|---|---|
| ಸಂಸ್ಕೃತ ಪ್ರಥಮಾ, ವೇದ ಪ್ರಥಮಾ. | 70.00 | 80.00 | 20.00 | 30.00 | 90.00 | 110.00 |
| ಸಂಸ್ಕೃತ ಕಾವ್ಯ, ವೇದ ಪ್ರವೇಶ. | 130.00 | 140.00 | 20.00 | 30.00 | 150.00 | 170.00 |
| ಸಂಸ್ಕೃತ ಸಾಹಿತ್ಯ, ವೇದ ಮೂಲ. | 190.00 | 200.00 | 20.00 | 30.00 | 210.00 | 230.00 |

**ನಿರ್ಣಯ**

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಿಸಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ 11**

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ, ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಿಸುವ ಬಗೆಗೆ.

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ, ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಹೆಚ್ಚಿಸಬೇಕಿದ್ದು, ಸದರಿ ವಿವರಗಳು ಈ ಕೆಳಕಂಡಂತಿವೆ.

| ಪರೀಕ್ಷೆಗಳು | ನೋಂದಣಿ ಶುಲ್ಕ | ಪರೀಕ್ಷಾ ಶುಲ್ಕ | | ಅಂಕಪಟ್ಟಿ ಶುಲ್ಕ | | ಒಟ್ಟು ಶುಲ್ಕ | |
|---|---|---|---|---|---|---|---|
| | | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ |
| ಸಂಸ್ಕೃತ ಪ್ರಥಮಾ, ವೇದ ಪ್ರಥಮಾ, | 100.00 | 70.00 | 100.00 | 20.00 | 40.00 | 190.00 | 240.00 |
| ಸಂಸ್ಕೃತ ಕಾವ್ಯ, ವೇದ ಪ್ರವೇಶ, | 200.00 | 130.00 | 160.00 | 20.00 | 40.00 | 350.00 | 400.00 |
| ಸಂಸ್ಕೃತ ಸಾಹಿತ್ಯ ವೇದ ಮೂಲ, | 300.00 | 190.00 | 220.00 | 20.00 | 40.00 | 510.00 | 560.00 |

**ನಿರ್ಣಯ**

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ, ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಿಸಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ 12**

ಸಂಸ್ಕೃತ ವಿಶ್ವವಿದ್ಯಾಲಯದ ಬಿ.ಎ ಶಾಸ್ತ್ರೀ & ಎಂ.ಎ.ಆಚಾರ್ಯ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಿಸುವ ಬಗೆಗೆ.

ಸಂಸ್ಕೃತ ವಿಶ್ವವಿದ್ಯಾಲಯದ ಬಿ.ಎ ಶಾಸ್ತ್ರೀ & ಎಂ.ಎ.ಆಚಾರ್ಯ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಹೆಚ್ಚಿಸಬಹುದಾಗಿದ್ದು ವಿವರಗಳು ಈ ಕೆಳಕಂಡಂತಿವೆ.

| ಪರೀಕ್ಷೆಗಳು | ಅರ್ಜಿ ಶುಲ್ಕ | | ಪರೀಕ್ಷಾ ಶುಲ್ಕ | | ಅಂಕಪಟ್ಟಿ ಶುಲ್ಕ | | ಒಟ್ಟು ಶುಲ್ಕ | |
|---|---|---|---|---|---|---|---|---|
| | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ | ಪ್ರಸ್ತುತ | ಪರಿಷ್ಕೃತ |
| ಬಿ.ಎ ಶಾಸ್ತ್ರೀ | 10.00 | 20.00 | 320.00 | 350.00 | 20.00 | 30.00 | 350.00 | 400.00 |
| ಎಂ.ಎ. ಆಚಾರ್ಯ | 10.00 | 20.00 | 470.00 | 550.00 | 20.00 | 30.00 | 500.00 | 600.00 |

**ನಿರ್ಣಯ**

ಸಂಸ್ಕೃತ ವಿಶ್ವವಿದ್ಯಾಲಯದ ಬಿ.ಎ ಶಾಸ್ತ್ರೀ & ಎಂ.ಎ.ಆಚಾರ್ಯ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಪರಿಷ್ಕರಿಸಲು ಸಭೆಯು ಒಪ್ಪಿದೆ.

ಕುಲಸಚಿವರು (ಪ್ರಭಾರ)

ಪ್ರೊ. ವಿ. ಗಿರೀಶ್ ಚಂದ್ರ